## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 726 |
| ಸದಸ್ಯರ ಹೆಸರು | : ಶ್ರೀ ಎಂ.ಎ. ಗೋಪಾಲಸ್ವಾಮಿ |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು |
| ಉತ್ತರಿಸುವ ದಿನಾಂಕ | : 25-09-2020 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನೌಕರರಿಗೆ ಕ್ಷುಲಕ ಕಾರಣಗಳಿಗಾಗಿ ನೋಟೀಸ್ ಜಾರಿ ಮಾಡುವುದು, ವೇತನ ತಡೆಹಿಡಿಯುವುದು ಮತ್ತು ಇಲಾಖಾ ವಿಚಾರಣೆಗೆ ಒಳಪಡಿಸುವಂತಹ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸಂಸ್ಥೆಗಳ ನೌಕರರಿಗೆ ಕ್ಷುಲ್ಲಕ ಕಾರಣಗಳಿಗಾಗಿ ನೋಟೀಸ್ ಜಾರಿ ಮಾಡುವುದು, ವೇತನ ತಡೆಹಿಡಿಯುವುದು ಮತ್ತು ಇಲಾಖಾ ವಿಚಾರಣೆಗೆ ಒಳಪಡಿಸುವಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.<br><br>ಸಾರಿಗೆ ನಿಗಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು "ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ಶಿಸ್ತು ಮತ್ತು ನಡತೆಗಳ ನಿಯಮಾವಳಿಗಳು 1971" ರಂತೆ ಯಾವುದೇ ಕರ್ತವ್ಯ ಲೋಪವೆಸಗಿದ್ದಲ್ಲಿ, ಸದರಿ ನಿಯಮಾವಳಿಗಳಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ. | ಸರ್ಕಾರವು ಇತರೆ ಸರ್ಕಾರಿ ನೌಕರರಿಗೆ ನೀಡುತ್ತಿರುವ ಸಂಬಳ ಮತ್ತು ಇತರೆ ಭತ್ಯೆಗಳಿಗೆ ಹೋಲಿಸಿದಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನೌಕರರಿಗೆ ನೀಡುತ್ತಿರುವ ಸಂಬಳ ಮತ್ತು ಇತರೆ ಭತ್ಯೆಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ತಾರತಮ್ಯವನ್ನು ನಿವಾರಣೆ ಮಾಡಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ಆಂತರಿಕ ಮೂಲಗಳಿಂದಲೇ ಭರಿಸಬೇಕಿದೆ.<br><br>ರಾಜ್ಯ ರಸ್ತೆ ಸಾರಿಗೆ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದೆ. ಆದರೆ, ರಾಜ್ಯ ಸರ್ಕಾರದ ನೌಕರರ ವೇತನವನ್ನು ರಾಜ್ಯ ವೇತನ ಆಯೋಗದ ಮುಖೇನ ಮಾಡಲಾಗುತ್ತದೆ.<br><br>ರಾಜ್ಯ ಸರ್ಕಾರದ ನೌಕರರ ಹುದ್ದೆಗಳು ಮತ್ತು ಅಲ್ಲಿನ ವೇತನ ಶ್ರೇಣಿಗಳು ಹಾಗೂ ರಸ್ತೆ ಸಾರಿಗೆ ನಿಗಮಗಳ ನೌಕರರ ಹುದ್ದೆಗಳು ಮತ್ತು ವೇತನ ಶ್ರೇಣಿಗಳು ಏಕರೂಪದಲ್ಲಿ ಇರುವುದಿಲ್ಲ. ಆದ್ದರಿಂದ, ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿ ಮತ್ತು ವೇತನವನ್ನು ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನ ಶ್ರೇಣಿ ಮತ್ತು ವೇತನಕ್ಕೆ ಹೋಲಿಸಲು ಬರುವುದಿಲ್ಲ. |

...2

| | | |
|---|---|---|
| ಇ. | ಹಾಸನ ಜಿಲ್ಲೆಯಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ಡಿಪೋಗಳ ಸಂಖ್ಯೆ ಎಷ್ಟು; ಈ ಡಿಪೋಗಳು ಹೊಂದಿರುವ ಬಸ್ಸುಗಳ ಸಂಖ್ಯೆ ಎಷ್ಟು; ಹಾಸನ ಜಿಲ್ಲೆಯ ಕೆಎಸ್‌ಆರ್‌ಟಿಸಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ಮತ್ತು ಅವರುಗಳ ವಿವರ ನೀಡುವುದು; ಹಾಸನ ಜಿಲ್ಲೆಯಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು ಮತ್ತು ಅವುಗಳ ವಿವರ ನೀಡುವುದು? | ಹಾಸನ ಜಿಲ್ಲೆಯಲ್ಲಿ ಒಟ್ಟು 09 ಬಸ್ ಡಿಪೋಗಳಿರುತ್ತವೆ. ಈ ಡಿಪೋಗಳು ಒಟ್ಟು 819 ಬಸ್ಸುಗಳನ್ನು ಹೊಂದಿರುತ್ತವೆ.<br><br>ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಹಾಸನ ವಿಭಾಗದ ಆಡಳಿತ ವ್ಯಾಪ್ತಿಯಲ್ಲಿ ಆಗಸ್ಟ್-2020ರ ಮಾಹೆಯ ಅಂತ್ಯಕ್ಕೆ ಒಟ್ಟಾರೆ 3556 ಅಧಿಕಾರಿ ಮತ್ತು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ. ಇವರ ಪೈಕಿ ಒಟ್ಟು 20 ಅಧಿಕಾರಿಗಳು, 3536 ಇತರೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ವಿವರವನ್ನು <u>ಅನುಬಂಧ-'ಅ'</u>ರಲ್ಲಿ ನೀಡಲಾಗಿದೆ.<br><br>ಹಾಸನ ಜಿಲ್ಲೆಯಲ್ಲಿ 27 ಬಸ್ ನಿಲ್ದಾಣಗಳಿದ್ದು ಅವುಗಳ ವಿವರವನ್ನು <u>ಅನುಬಂಧ-'ಆ'</u>ರಲ್ಲಿ ನೀಡಲಾಗಿದೆ. |

ಸಂಖ್ಯೆ: ಟಿಡಿ 157 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

LAQ - 726 (KSRTC)

KSRTC : CENTRAL OFFCIE : BENGALURU

HASSAN DIVISION STAFF POSITION

ಅನುಬಂಧ-೩

| SL NO. | DEPOT | DRIVER | CONDUCTOR | Driver CUM CONDUCTOR | TRAFFIC | MECHANICAL | ADM | OFFICER | GRAND TOTAL |
|---|---|---|---|---|---|---|---|---|---|
| 1 | HASSAN DEPOT-1 | 158 | 29 | 162 | 28 | 52 | 31 | 1 | 461 |
| 2 | HASSAN DEPOT-2 | 140 | 33 | 147 | 7 | 55 | 20 | 1 | 403 |
| 3 | CHANNARAYAPATNA | 158 | 26 | 157 | 13 | 61 | 23 | 1 | 439 |
| 4 | RAMNATHPURA | 129 | 11 | 130 | 6 | 50 | 14 | 1 | 341 |
| 5 | HOLENARASIPURA | 156 | 20 | 142 | 7 | 50 | 16 | 1 | 392 |
| 6 | ARAKALAGUDU | 135 | 13 | 134 | 7 | 48 | 19 | 1 | 357 |
| 7 | WORKSHOP | 0 | 0 | 1 | 0 | 50 | 7 | 1 | 59 |
| 8 | HASSAN DIVISION OFFICE | 12 | 0 | 0 | 13 | 2 | 81 | 10 | 118 |
| 10 | TOTAL | 888 | 132 | 873 | 81 | 368 | 211 | 17 | 2570 |

STAFF POSITION OF THE DEPOTS WHICH COMES UNDER CHIKKAMAGLURU DIVISION PERTAINS TO HASSAN DISTIRCT

| SL NO. | DEPOT | DRIVER | CONDUCTOR | Driver CUM CONDUCTOR | TRAFFIC | MECHANICAL | ADM | OFFICER | GRAND TOTAL |
|---|---|---|---|---|---|---|---|---|---|
| 1 | ARASIKERE | 150 | 29 | 163 | 19 | 56 | 25 | 1 | 443 |
| 2 | SAKALESHPURA | 124 | 15 | 164 | 10 | 42 | 21 | 1 | 377 |
| 3 | BELUR | 60 | 7 | 51 | 11 | 19 | 17 | 1 | 166 |
| | TOTAL | 334 | 51 | 378 | 40 | 117 | 63 | 3 | 986 |
| | GRAND TOTAL | 1222 | 183 | 1251 | 121 | 485 | 274 | 20 | 3556 |

ASSISTANT ADMINISTATIVE OFFICER (PERSONNEL)
KSRTC :: CENTRAL OFFICE :: BENGALURU

LC-726 (KSRTC)

ಅನುಬಂಧ-ಆ

ಹಾಸನ ಜಿಲ್ಲೆಯಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ಹಾಸನ ವಿಭಾಗದ ಬಸ್ ನಿಲ್ದಾಣಗಳ ವಿವರ |
|---|---|
| 1 | ಹಾಸನ ಕೇಂದ್ರೀಯ ಬಸ್ ನಿಲ್ದಾಣ |
| 2 | ಹಾಸನ ನಗರ ಸಾರಿಗೆ ಬಸ್ ನಿಲ್ದಾಣ |
| 3 | ಚನ್ನರಾಯಪಟ್ಟಣ ಬಸ್ ನಿಲ್ದಾಣ |
| 4 | ಸಾಲಗಾಮೆ ಬಸ್ ನಿಲ್ದಾಣ |
| 5 | ಆಲೂರು ಬಸ್ ನಿಲ್ದಾಣ |
| 6 | ದುದ್ದ ಬಸ್ ನಿಲ್ದಾಣ |
| 7 | ಚನ್ನರಾಯಪಟ್ಟಣ ಬಸ್ ನಿಲ್ದಾಣ |
| 8 | ನುಗ್ಗೆಹಳ್ಳಿ ಬಸ್ ನಿಲ್ದಾಣ |
| 9 | ಹಿರಿಸಾವೆ ಬಸ್ ನಿಲ್ದಾಣ |
| 10 | ಶ್ರವಣಬೆಳಗೊಳ ಬಸ್ ನಿಲ್ದಾಣ |
| 11 | ಹೊಳೆನರಸೀಪುರ ಬಸ್ ನಿಲ್ದಾಣ |
| 12 | ಹಳ್ಳಿಮೈಸೂರು ಬಸ್ ನಿಲ್ದಾಣ |
| 13 | ಅರಕಲಗೂಡು ಹೊಸ ಬಸ್ ನಿಲ್ದಾಣ |
| 14 | ಅರಕಲಗೂಡು ಹಳೇ ಬಸ್ ನಿಲ್ದಾಣ |
| 15 | ಗೊರೂರು ಬಸ್ ನಿಲ್ದಾಣ |
| 16 | ರಾಮನಾಥಪುರ ಬಸ್ ನಿಲ್ದಾಣ |
| 17 | ಕೊಣನೂರು ಬಸ್ ನಿಲ್ದಾಣ |
| 18 | ಕೇರಳಾಪುರ ಬಸ್ ನಿಲ್ದಾಣ |
| 19 | ಸಕಲೇಶಪುರ ಬಸ್ ನಿಲ್ದಾಣ |
| 20 | ಅರಸೀಕೆರೆ ಬಸ್ ನಿಲ್ದಾಣ |
| 21 | ಬೇಲೂರು ಬಸ್ ನಿಲ್ದಾಣ |
| 22 | ಹಳೇಬೀಡು ಬಸ್ ನಿಲ್ದಾಣ |
| 23 | ಜಾವಗಲ್ ಬಸ್ ನಿಲ್ದಾಣ |
| 24 | ಜೆ.ಸಿ.ಪುರ ಬಸ್ ನಿಲ್ದಾಣ |
| 25 | ಅರೇಹಳ್ಳಿ ಬಸ್ ನಿಲ್ದಾಣ |
| 26 | ಗಂಡಸಿ ಬಸ್ ನಿಲ್ದಾಣ |
| 27 | ಬಾಣಾವರ ಬಸ್ ನಿಲ್ದಾಣ |

ಮುಖ್ಯ ಕಾಮಗಾರಿ ಅಭಿಯಂತರರು
ಕರಾರಸಾನಿಗಮ